SC:77/2020
PW:40 CW:51

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

ಹೇಳಿಕೆ ಹಾಳೆ
ಆರ್.ಪಿ. ಸಂಖ್ಯೆ57
ನಮೂನೆ ಸಂಖ್ಯೆ4
(ಸಿವಿಲ್)

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 77/2020

| | |
|---|---|
| PW | 40 |
| CW | 51 |

**ಸಾಕ್ಷಿದಾರರು ನ್ಯಾಯಾಲಯದ ಮುಂದೆ ವಿ.ಸಿ ಮೂಲಕ ಹಾಜರಾಗಿದ್ದು ಅವರಿಗೆ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 16.10.2025.

| | | |
|---|---|---|
| ಸಾಕ್ಷಿಯ ಹೆಸರು | : | ಬಿ ರಾಜು |
| ಗಂಡನ ಹೆಸರು | : | ಸಿ. ಡಿ ಬೋರಯ್ಯ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಪೊಲೀಸ್ ಇನ್ಸ್‌ಪೆಕ್ಟರ್, ದಾಬಸ್ ಪೇಟೆ ಪೊಲೀಸ್ ಠಾಣೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| ವಾಸಸ್ಥಳ | : | ದಾಬಸ್ ಪೇಟೆ |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

1. ನಾನು ದಿ.19.07.2022 ರಿಂದ ದಿ.20.09.2023 ರವರೆಗೆ ಚಿಕ್ಕಬಳ್ಳಾಪುರ ವೃತ್ತದಲ್ಲಿ ವೃತ್ತ ನಿರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 30.11.2022 ರಂದು ಚಾಸಾ 50 ರವರು ಸಲ್ಲಿಸಿದ DNA ಪರೀಕ್ಷಾ ವರದಿಯನ್ನು ಪಡೆದು ನ್ಯಾಯಾಲಯಕ್ಕೆ ವರದಿಯೊಂದಿಗೆ ಹೆಚ್ಚುವರಿ ದೋಷರೋಪಣ ಪತ್ರ ಸಲಿಸಿರುತ್ತೇನೆ. ಸಾಕ್ಷಿದಾರರು ತಾನು ಪಡೆದ ನಿಪಿ 62 ವರದಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಪಿ.ಎಸ್ ವಕೀಲರಿಂದಃ**

3. ನಾನು ಸಲ್ಲಿಸಿದ ಹೆಚ್ಚುವರಿ ದೋಷರೋಪಣ ಪತ್ರದೊಂದಿಗೆ ಚಾಸಾ 50 ರವರಿಗೆ ನಮ್ಮ ಕಚೇರಿಯಿಂದ ಹೋದ ಆರ್ಟಿಕಲ್ ನಮೂನೆ ಇದ್ದ ಮನವಿ ಪತ್ರವನ್ನು ನ್ಯಾಯಾಲಯದ ಮುಂದ ಹಾಜರು ಪಡಿಸಿರುತ್ತೇನೆ. ನಾನು ಸಲ್ಲಿಸಿದ ಹೆಚ್ಚುವರಿ ದೋಷರೋಪಣ ಪತ್ರದೊಂದಿಗೆ ನನ್ನ ಹಿಂದಿನ ತನಿಖಾಧಿಕಾರಿಗಳು FSL ಗೆ ಆರ್ಟಿಕಲ್ ಕಳುಹಿಸಿ ಪಡೆದ ಸ್ವೀಕೃತಿ ಪತ್ರವನ್ನು ಹಾಜರು ಪಡಿಸಿಲ್ಲ. ಹೆಚ್ಚುವರಿ ದೋಷರೋಪಣ ಪತ್ರದಲ್ಲಿ ಮೃತನ ದೇಹದಿಂದ ಕೈಬೆರಳುಗಳ ಉಗರನ್ನು ಸಂಗ್ರಹಿಸಿದ ವೈದರ ಹೆಸರನ್ನು ನಾನು ಕಣಿಸಿಲ್ಲ, ಕಾರಣ ಅದು ಸಾಕ್ಷಿ ಪಟ್ಟಿಯಲ್ಲಿ ನಮೂದಾಗಿಲ್ಲ. ನಮ್ಮ ಠಾಣೆಯಲ್ಲಿ ದೋಷರೋಪಣ ಪ್ರತಿ ಇರುತ್ತದೆ. ಪಿ ಎಂ ವರದಿಯಲ್ಲಿ ಮರಣೋತ್ತರ ಪರೀಕ್ಷೆ ಮಾಡಿದ ವೈಧ್ಯರು ಮೃತ ದೇಹದಿಂದ ಕೈಬೆರಳುಗಳ ಉಗುರಗಳನ್ನು ಸಂಗ್ರಹಿಸಿರುವ ಬಗ್ಗೆ ನಮೂದಾಗಿರುತ್ತದೆ. ಈಗ ನನ್ನ ಬಳಿ ಸದರಿ ಪಿ ಎಂ ವರದಿ ಲಭ್ಯವಿರುದಿಲ್ಲ.

4. ನಾನು ಸಲ್ಲಿಸಿದ ಹೆಚ್ಚುವರಿ ದೋಷರೋಪಣ ಪತ್ರದಲ್ಲಿ ಹಿಂದಿನ ತನಿಖಾಧಿಕಾರಿಗಳು ವೈಧ್ಯರಿಂದ ಯಾವ ದಿನಾಂಕದಂದು ಕೈಬೆರಳುಗಳ ಉಗುರಗಳನ್ನು ಪಡೆದಿರುತ್ತಾರೆಂದು ನಾನು ನಮೂದಿಸಿಲ್ಲ. ನಾನು DNA ವರದಿ ಪಡೆದ ನಂತರ ಯಾವುದೇ ಆರೋಪಿತರ ಚರ್ಮದ ಮಾದರಿಯನ್ನು ಪಡೆದು ವೈಜ್ಞಾನಿಕ ಪರೀಕ್ಷೆಗಾಗಿ ಚಾಸಾ 50 ಡಾ. ಶಹನಾಜ್ ಫಾತೀಮಾ ಇವರಿಗೆ ಕಳುಹಿಸಿ, ಸದರಿ ಚರ್ಮದ ಅಂತ ಆರೋಪಿತರ ಚರ್ಮಕ್ಕೆ ಹೋಲಿಕೆಯಾಗುತ್ತದೆ ಎಂಬ ಬಗ್ಗೆ ನಿಖರ ಅಭಿಪ್ರಾಯ ಪಡೆಯಲು ನಾನು ಪ್ರಯತ್ನಿಸಿಲ್ಲ. ನಿಪಿ 62 ವರದಿಯಲ್ಲಿ ಪುರಷನಿಗೆ ಸಂಬಂಧಿಸಿದ ಚರ್ಮದ ಅಂಶ ಇರುವುದಾಗಿ ತಿಳಿದು ಬಂದ ನಂತರವು ಸಹ ನಾನು ಹೆಚ್ಚಿನ ತನಿಖಾ ಕಾರ್ಯ ಮಾಡಲು ಪ್ರಯತ್ನಿಸಿಲ್ಲ.

SC:77/2020
PW:40 CW:51

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಹೆಚ್. ಆರ್. ವಿ ವಕೀಲರಿಂದಃ</u>**

ಶ್ರೀ ಹೆಚ್.ಆರ್.ವಿ ವಕೀಲರು ಶ್ರೀ ಪಿ.ಎಸ್ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ.

**<u>ಮರುವಿಚಾರಣೆಃ</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 16.10.2025 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

**ಸಹಿ/-**
**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.